


### ಕನ್ನಡದ ಎಲ್ಲ ಅಕ್ಷರ ಬೇಕು

ಲಿಂಗದೇವರು ಹಳೆಮನೆಯವರು ಕನ್ನಡ ಅಕ್ಷರಮಾಲೆಗೆ ಕತ್ತರಿ ಹಾಕುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಾದವೇ ಮಾಡುವುದಾದಲ್ಲಿ, ಒಂದು ಭಾಷೆಯಲ್ಲಿ ಪದಗಳ ಸೃಷ್ಟಿಗೆ ಖಂಡಿತವಾಗಿಯೂ 50–55 ಅಕ್ಷರಗಳು ಬೇಡ. ಉದಾಹರಣೆಗೆ ನಮ್ಮಲ್ಲಿ ಎರಡು ವ್ಯಂಜನಗಳು ಮತ್ತು ಎರಡೇ ಸ್ವರಗಳು ಇವೆಯೆಂದು ಭಾವಿಸೋಣ: ಕ್,ಪ್,ಅ ಮತ್ತು ಇ. ಇವುಗಳಿಂದ ನಮಗೆ ನಾಲ್ಕು ಅಕ್ಷರಗಳು ದೊರಕುತ್ತವೆ: ಕ,ಕಿ,ಪ,ಪಿ.– ಈ ನಾಲ್ಕು ಅಕ್ಷರಗಳನ್ನು ಬಳಸಿ ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ, ಐದಕ್ಷರ ಮತ್ತು ಆರಕ್ಷರದ ಎಷ್ಟು ಪದಗಳನ್ನು ಸೃಷ್ಟಿಸಬಹುದು? ನಿಮಗೆ ಆಶ್ಚರ್ಯವಾಗಬಹುದು. ಒಟ್ಟು 5426 ಪದಗಳು ದೊರಕುತ್ತವೆ! ಮತ್ತೊಂದೇ ಸ್ವರ ಅಥವಾ ವ್ಯಂಜನವಿದ್ದಲ್ಲಿ ಈ ಪಟ್ಟಿ ಲಕ್ಷ ತಲುಪುತ್ತದೆ!

ಸಮೃದ್ಧವಾದ ಪದಗಳನ್ನು ಮಾತನಾಡುವ ಸಾಮರ್ಥ್ಯ ಮನುಷ್ಯನಿಗೆ ಪ್ರಕೃತಿದತ್ತವಾಗಿ ಬಂದಿರುವಾಗ ಖಂಡಿತವಾಗಿಯೂ ಕನ್ನಡದ ಎಲ್ಲ ಅಕ್ಷರಗಳೂ ಬೇಕು. ಅದು ನಮ್ಮ ಹೆಗ್ಗಳಿಕೆ! ಕನ್ನಡದಲ್ಲಿನ ಈ ಧ್ವನಿಭಂಡಾರ ಮತ್ತು ಲಿಪಿಭಂಡಾರ ಪ್ರಪಂಚದ ಇನ್ನಾವುದೇ ಭಾಷೆಗೂ ಇಲ್ಲ!

–ಡಾ. ಎಸ್.ವಿ. ನರಸಿಂಹನ್, ವೀರಾಜಪೇಟೆ

### ಹಂತ ಹಂತವಾಗಿ ಆಗಲಿ

ದಿಢೀರ್ ಎಂದು 15 ಅಕ್ಷರಗಳನ್ನು ಕೈಬಿಟ್ಟರೆ ಆಗುವ ಪರಿಣಾಮದ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಶಿಕ್ಷಕರಿಗೇನೋ ತರಬೇತಿ ಕೊಡಬಹುದು, ಸರಿ. ಆದರೆ ಈ ಪೀಳಿಗೆಯ ಮಕ್ಕಳು ಈಗಾಗಲೇ ರಚಿತವಾಗಿರುವ ಕನ್ನಡದ ಕಥೆ, ಕಾವ್ಯ, ಲೇಖನಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವೇ? ಅಥವಾ 32 ಅಕ್ಷರ ಮಾಲೆಯ ಬರಹಕ್ಕೆ ಅವನ್ನೆಲ್ಲಾ ಬದಲಾಯಿಸಲು ಸಾಧ್ಯವೇ?

ಬೇಕಿದ್ದರೆ ಹಂತ ಹಂತವಾಗಿ ಒಂದು ಅಥವಾ ಎರಡು ಅಕ್ಷರಗಳನ್ನು ಬಿಡುತ್ತಾ ಬರಬಹುದು. 'ಫ' ಮತ್ತು 'ಃ' ಇವೆರಡೂ ಹೆಚ್ಚು ಮಕ್ಕಳನ್ನು ಗೊಂದಲದಲ್ಲಿ ಸಿಲುಕಿಸುತ್ತವೆ. ಉದಾ: ವಿಸರ್ಗವನ್ನು ವಿಸರಗ ಎಂದು ಬರೆದರೆ ಹೆಚ್ಚು ವ್ಯತ್ಯಾಸವೇನೂ ಆಗುವುದಿಲ್ಲ. ಹಾಗೆಯೇ ವಿಷಯವನ್ನು 'ವಿಶಯ' ಎಂದು ಬರೆಯುವದರಿಂದಲೂ ಏನೂ ಹಾನಿ ಆಗದು.

–ಪುಷ್ಪಾ ಶ್ರೀರಾಮ ರಾಜು, ಬೆಂಗಳೂರು

### ಸಂಕನ್ನಡ

'ಕನ್ನಡ ಅಕ್ಷರ ಮಾಲೆಗೆ ಕತ್ತರಿ ಹಾಕಬೇಕೇ?' –ಕೆಲವು ಅಕ್ಷರಗಳನ್ನು ಬಿಡಬಹುದು, ನಿಜ. ಆದರೆ ಅಚ್ಚಗನ್ನಡ ಎನ್ನುವುದು ಎಲ್ಲಿದೆ? ಸಂಸ್ಕೃತ ಶಬ್ದಗಳು ಹಾಸು ಹೊಕ್ಕಾಗಿವೆಯಲ್ಲ! ಕನ್ನಡ ಎನ್ನುವುದು ವಸ್ತುಶಃ 'ಸಂಕನ್ನಡ' ('ಕಂಗ್ಲಿಷ್' ಎಂದ ಹಾಗೆ). 'ಸಂಕಟ'ಕ್ಕೆ ಇದೇ ಕಾರಣ!

–ಸಿಪಿಕೆ, ಮೈಸೂರು

### ಹಸ್ತಾಕ್ಷರದ ಮಾಹಿತಿ

ಹಸ್ತಾಕ್ಷರ ಶಾಸ್ತ್ರ, ಕೈಬರಹ ಮತ್ತು ಭವಿಷ್ಯ ಲೇಖನಗಳು (ಬಿ.ಎಂ.ಹನೀಫ್, ಯಲ್ಲೂರು ಪ್ರಭು) ಉಪಯುಕ್ತ ಮಾಹಿತಿ ನೀಡಿವೆ.

– ಅಶ್ವಿನಿ ಬಿ ಐಯ್ಯರ್, ಮಂಡ್ಯ/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ಅ.ಕ.ಕೃಷ್ಣಮೂರ್ತಿ, ಮಂಡ್ಯ

### ಮುನಿಯಪ್ಪ ಸ್ಫೂರ್ತಿ

ಸಿರಿವಂತರಿಗಷ್ಟೇ ಮೀಸಲು ಎಂಬ ಸಂಪ್ರದಾಯ ಮುರಿದು ಗಾಲ್ಫ್ ಕ್ರೀಡೆಯಲ್ಲಿ ಎತ್ತರಕ್ಕೇರಿರುವ 'ಚಾಂಪಿಯನ್ ಮುನಿಯಪ್ಪ!' (ಓಂಕಾರಮೂರ್ತಿ) ಲೇಖನ ಅಂಧ ನಂಬಿಕೆಗೆ ಮಂಗಳ ಹಾಡಿದೆ. ಕೀಳರಿಮೆಯಿಂದ, ಭ್ರಮೆಗಳಿಂದ ನರಳುವ ಕ್ರೀಡಾ ಪಟುಗಳಿಗೆ ಧೈರ್ಯ, ಸ್ಫೂರ್ತಿ, ಮಾರ್ಗದರ್ಶನ ಮಾಡಿದೆ.

–ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ/ ರತ್ನ ಸತ್ಯೇಂದ್ರ, ಮೈಸೂರು/ ಅರ್ಜುನ ವಿ. ಮಂಡ್ಯ/ ಆ.ರಾ.ಮಂಜುನಾಥ, ಗೆದರೆ

### ಸಕಾಲಿಕ ವಿಚಾರ

ವರ್ಷ ಭೈರವ– ವಿಶ್ಲೇಷಣೆ (ಶಿಕಾಕು) ಸಕಾಲಿಕ, ಆದರೆ ನಮ್ಮ ರಾಜ್ಯದ ಜನಪ್ರತಿನಿಧಿಗಳು ಇದೇ ವೇಳೆಯಲ್ಲಿ ಅಧಿಕಾರಕ್ಕಾಗಿ ಕಚ್ಚಾಡುತ್ತಿರುವುದು ಖೇದಕರ. ಹೊಸತು ಅಂಕಣ ಚೆನ್ನಾಗಿ ಬರುತ್ತಿದೆ, ಸ್ವಾಗತ.

–ಎಂ.ಎಲ್. ಲಕ್ಷ್ಮಣರಾವ್, ದಾವಣಗೆರೆ

### ಸಂದರ್ಭೋಚಿತ

'ವಿಚಾರ ಲಹರಿ' ಅಂಕಣದಲ್ಲಿ ವೈನತೇಯ ಅವರ 'ದೇವರು ಹಚ್ಚಿದ ದೀಪ' ಕಿರುಬರಹ ಓದುಗರಲ್ಲಿ ಅರಿವಿನ ಜ್ಯೋತಿಯನ್ನು ಬೆಳಗಿಸುವಂತಿತ್ತು, ಹಾಗೂ ಸಂದರ್ಭೋಚಿತವಾಗಿತ್ತು.

–ಬಸವರಾಜ ಹೂಗಾರ, ಹಿರೇಶಿಂಗನಗುತ್ತಿ

### ಸೃಷ್ಟಿ ವೈಚಿತ್ರ್ಯ– ಸುಧಾ ಯಶಸ್ವಿ

ಸೃಷ್ಟಿ ವೈಚಿತ್ರ್ಯಗಳನ್ನು ಓದುಗರ ಮುಂದಿಡುವಲ್ಲಿ 'ಸುಧಾ' ಪತ್ರಿಕೆ ಸದಾ ಯಶಸ್ವಿ.

'ಜಂಗಮ ಕೋಟೆ'ಯ ಬಳಿಯ ಕಣಿವೆ ಪ್ರದೇಶ ನಿಜಕ್ಕೂ ರಮಣೀಯ ಮತ್ತು ನಯನ ಮನೋಹರ. ಇಂತಹದ್ದೇ ಕಣಿವೆ 'ನಂದಿ' ಗ್ರಾಮದ ಬಳಿಯೂ ಕಾಣಸಿಗುತ್ತದೆ. ನಂದಿ ಬೆಟ್ಟದಿಂದ ಹರಿದುಬರುವ ನೀರಿನಿಂದಲೇ ಉಂಟಾಗುವ ಕಣಿವೆಗಳಿವು.

–ನೆ.ಲ.ರಾಂ., ಬೆಂಗಳೂರು

### ಖರೆ ಅನುಭೂತಿ

ವಿಶ್ವನಾಥ ಅಡಿಗರ 'ಬೆಂಗಳೂರೆಂಬ ಖರೆ ಅನುಭೂತಿ' ಪ್ರಬಂಧ. ಮಾಯಾನಗರಿಯ ಎಲ್ಲಾ ಮಗ್ಗಲುಗಳನ್ನು ತಿರುವಿ ಹಾಕಿದೆ.

–ಕೊಹಿಮ. ಬಸರಕೋಡು

### ನೀವು ಕೇಳಿದಿರಿ... ಕುತೂಹಲಕಾರಿ

'ನೀವು ಕೇಳಿದಿರಿ?' ವಿಭಾಗದಲ್ಲಿ ಪ್ರಶ್ನೋತ್ತರಗಳು ಮುದನೀಡುತ್ತಿವೆ. ರಾಮ್ ಅವರ ಉತ್ತರಗಳು ವ್ಯಂಗ್ಯ ಹಾಗೂ ಅರ್ಥಪೂರ್ಣವಾಗಿದ್ದು ಗಮನ ಸೆಳೆಯುತ್ತಿವೆ. ಬಹುಶಃ ಬೀಚಿಯವರ ನಂತರ ಈ ವಿಭಾಗ ಮತ್ತೆ ಅತ್ಯಂತ ಕುತೂಹಲ ಕೆರಳಿಸುತ್ತಿದೆ. ಇದು 'ಸುಧಾ'ದಲ್ಲಿ ಮೂಡಿಬರುವ ಅತ್ಯಂತ ಆಸಕ್ತಿದಾಯಕ ಅಂಕಣ.

–ಕೃಷ್ಣಮೂರ್ತಿ, ಹೊಸ ದೆಹಲಿ


